## ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸೇಡಂ

## CC No.589-2024

**(ಇಂದು ದಿಃ 18-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ತಾರಾಬಾಯಿ | CW-2 | PW-7 |
| ತಂದೆ/ಗಂಡನ ಹೆಸರು | ಖಾಜನಾಯಕ | | |
| ವಯಸ್ಸು | 63 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಜಾಕನಪಲ್ಲಿ ತಾಂಡಾ ತಾಲ್ಲೂಕು ಸೇಡಂ | | |

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ನನ್ನ ಹೆಸರು ತಾರಾಬಾಯಿ . ಖಾಜಾನಾಯಕ ನನ್ನ ಗಂಡ. ಚಾಸಾ-7 ನನ್ನ ಮಗ. 4 ವರ್ಷ ಗಳ ಹಿಂದೆ ನಾನು ಕಟ್ಟಿಗೆ ತೆಗೆದುಕೊಂಡು ಹೊಲದಿಂದ  ನಾನು ಮತ್ತು ಚಾಸ-1 ಬರುತ್ತಿರುವಾಗ ಅಲ್ಲಿಗೆ ಹಿಂದೆ  ಬಂದ ಆರೋಪಿಗಳು ಚಾಸ-1 ರ ಬೆನ್ನಿಗೆ ಕಟ್ಟಿಗೆಯಿಂದ ಹೊಡೆದರು . ಆಗ ಚಾಸಾ-1 ರವರಿಗೆ ಗಾಯ ಆಗಿ ಕೆಳಕ್ಕೆ ಬಿದ್ದರು . ಖಾಜಾನಾಯಕರವರಿಗೆ ಹಣೆಗೆ , ಎಡ ಗೈ ಬುಜಕ್ಕೆ ಮತ್ತು ಕಾಲಿಗೆ ಗಾಯವಾಗಿತ್ತು. ಆ ರೀತಿ ಹಲ್ಲೆ ಮಾಡಿ ಆರೋಪಿಗಳು ಓಡಿ ಹೋದರು. ಗಲಾಟೆ ನಂತರ ಚಾಸಾ-1 ರವರನ್ನು ಮುದೋಳ ಸರಕಾರಿ ಆಸ್ಪತೆರಗೆ ಕರೆದುಕೊಂಡು ಹೋದರು . ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ಈ ಹಂತದಲ್ಲಿ ಸ.ಸ.ಅ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ- ಸಹಾಯಕ ಸರ್ಕಾರಿ ಅಭೀಯೋಜಕರಿಂದಃ-**

ದಿಃ  21-05-2021 ರಂದು ಸಂಜೆ 06.00 ಗಂಟೆ ಗೆ ಆಗಿತು್ತ ಎಂದರೆ ಸರಿ. ಆರೋಪಿಗಳು ನನ್ನ ಗಂಡನನ್ನು ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿದರು ಎಂದರೆ ಸರಿ.

ಪಾಟೀ ಸವಾಲು ಃ ಶ್ರೀ NR ವಕೀಲರಿಂದಃ

1ನೇ ಆರೋಪಿ ನಮ್ಮ ದಾಯಾದಿ ಎಂದರೆ ಸರಿ. ನಮ್ಮ ಗ್ರಾಮದ ಹನುಮ್ಯಾ ನಾಯಕ ತಂದೆ ಕತನೆನಾಯಕ ತೀರಿ ಹೋಗಿದ್ದಾರೆ ಎಂದರೆ ಸರಿಯಲ್ಲ. ಹನುಮ್ಯಾ ನಾಯಕ ತೀರಿ ಹೋದ ಸಂಬಂಧ ಗ್ರಾಮದಲ್ಲಿ 9 ದಿನದ ಕಾರ್ಯ ಇತ್ತು ಎಂದರೆ ಸರಿ. ಆ ರೀತಿ ಕಾರ್ಯ ಇದ್ದಾಗನಮ್ಮ ಸಮಾಜದಲಿ ಒಬ್ಬ ದೊಡ್ಡ ವ್ಯಕ್ತಿಗೆ ಜವಾಬ್ದಾರಿ ನೀಡಿತ್ತಾರೇ ಎಂದರೆ ಸರಿ. ಹನುಮ್ಯಾ ನಾಯಕನ 9 ದಿನದ ಕಾರ್ಯ ದ ಜವಬ್ದಾರಿಯನ್ನು 3 ನೇ ಆರೋಪಿಗೆ ಕೊಟ್ಟಿದ್ದರು ಎಂದರೆ ಸರಿ . ನಾವು ಬಾಹು ಬಂದ ಇದ್ದರು ನಮಗೆ ಜವಬ್ದರಾರಿ ಕೊಟ್ಟಿಲ್ಲ ಎಂದು ಚಾಸ-1 ಕುಡಿದು ಬಂದು ಸದರಿ ಕಾರ್ಯಕ್ರಮದಲ್ಲಿ ಗಲಾಟೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಹನುಮ್ಯಾ ನಾಯಕ ತೀರಿ ಹೋಗುವ 1 ತಿಂಗಳ ಮುಂಚೆ ನಮ್ಮ ಸಂಬಂಧಿ ಲಕ್ಷ್ಮೀ ಬಾಯಿ ತೀರಿ ಹೋಗಿದ್ದರು ಎಂದರೆ ಸರಿ. ನಮ್ಮ ಸಮಾಜದಲ್ಲಿ ಯಾರಾದರು ತೀರಿ ಹೋದರೆ ಮನೆಯವರು ಖರ್ಚು ಮಾಡುವುದಿಲ್ಲ ಒರಗಿನವರು ಖರ್ಚು ಮಾಡುತ್ತಾರೆ ಎಂದರೆಸರಿ . ನಂತರ ಲೆಕ್ಕಾ ಮಾಡಿ ಮನೆಯವರು ಖರ್ಚು ಮಾಡಿದವರಿಗೆ ಹಣ ಕೋಡುತ್ತಾರೆ ಎಂದರೆ ಸರಿ. ಲಕ್ಷ್ಮೀ ಬಾಯಿ ತೀರಿ ಹೋದಾಗ 3 ನೇ ಆರೋಪಿ ಖರ್ಚು ಮಾಡಿದ್ದರು ನಂತರ ಅವರ ಮನೆಯವರು ಲೆಕ್ಕಾ ಮಾಡಿ 3 ನೇ ಆರೋಪಿಗೆ ಹಣ ಕೋಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ, 3ನೇ ಆರೋಪಿಯನ್ನು ಬಿಟ್ಟು ಬೇರಯವರು ಖರ್ಚು ಮಾಡಿರಲಿಲ್ಲಾ ಎಂದರೆ ನನಗೆ ಗೊತ್ತಿಲ್ಲ, ಜನ 3,000/- ರೂಪಾಯಿ ಸೇರಿಸಿ 3 ನೇ ಆರೋಪಿಗೆ ಕೊಟ್ಟಿದ್ದರು ಎಂದು ನನ್ನ ದೂರಿನಲ್ಲಿ ಹೇಳಿ ಬರೆಯಿಸಿಲ್ಲ, ಲಕ್ಷ್ಮೀ ಬಾಯಿ ಕಾರ್ಯಕ್ಕೆ ನಾವು ಖರ್ಚು ಮಾಡಿದ್ದೇವು ಎಂದು ನಾವು ದೂರು ನೀಡಿಲ್ಲ, ನನ್ನ ಗಂಡನಿಗೆ ಆರೋಪಿಗಳು ಬೇಳೆಯುತ್ತಿದ್ದಾರೆ ಎಂದು ಹೊಟ್ಟೆ ಕಿಚ್ಚು ಎಂದರೆ ಸರಿಯಲ್ಲ, ಲಕ್ಷ್ಮೀ ಬಾಯಿ ತೀರಿ ಹೋದಾಗ ಜನ ಹಣ ನೀಡಿದ್ದರು ಎಂದು ಸದರಿ ಹಣವನ್ನು ಚಾಸ-1 , 3ನೇ ಆರೋಪಿಯಿಂದ ಕೇಳಿದಾಗ ಆರೋಪಿಗಳು ಹಣ

ನಮಗೆ ವಾಪಸ್ಸ ಕೊಟ್ಟು ನಮ್ಮ ಮೇಲೆ ದ್ವೇಷ ಕಟ್ಟಿಕೊಂಡು ವಿನಾಹಕಾರಣ ಜಗಳ ಮಾಡಿ ಚಾಸಾ-1 ರವರ ಮೇಲೆ ಹಲ್ಲೆ ಮಾಡಿದರು ಎಂದು ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ದಿಃ 21-05-2021 ರಂದು ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ, ಆರೋಪಿಗಳು ಹಿಂದಿನಿಂದ ಬಂದು ಚಾಸಾ-1 ರ ಮೇಲೆ ಕಟ್ಟಿಗೆಯಿಂದ ಹಲ್ಲೆ ಮಾಡಿದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ದೂರಿನಲ್ಲಿ ಮುಂದೆ ಹಿಂದ ಬಂದರು ಎಂದು ಹೇಳಿ ಬರೆಯಿಸಿಲ್ಲ, ಆರೊಪಿಗಳು ಹಲ್ಲೆ ಮಾಡಿದ್ದರಿಂದ ನನ್ನ ಗಂಡನ ಹಣೆಗೆ ಮತ್ತು ಇತರೆ ಭಾಗಕ್ಕೆ ಗಾಯಗಳು ಆದವು ು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ, ಸೇಡಂ.**